ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಅಪಘಾತವಾದ ದಿನ ನಾನು ನನ್ನ ಗಂಡನ ಜೊತೆ ಬೈಕ್ ನಲ್ಲಿ ಹೋಗುತ್ತಿದ್ದೆ. ಬೈಕ್ ನನ್ನ ಗಂಡನಿಗೆ ಸೇರಿದೆ. ನನ್ನ ಗಂಡನ ಬಳಿ ಡಿ.ಎಲ್ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತವಾದ ದಿನ ನಾನು ಮತ್ತು ನನ್ನ ಗಂಡ ಹೆಲ್ಮೆಟ್ ಧರಿಸಿದ್ದೆವು. ಅಪಘಾತವಾದ ದಿನಾಂಕ 27.06.2024ರಂದು ಆಗಿರುತ್ತದೆ. ಆಗ ಬೆಳಗ್ಗೆ 9-00 ಗಂಟೆ ಆಗಿತ್ತು. ನನ್ನ ಗಂಡ ವೇಗವಾಗಿ ಓಡಿಸುತ್ತಿದ್ದರು ಇದ್ದಕ್ಕಿದ್ದ ಹಾಗೆ ಬ್ರೇಕ್ ಹಾಕಿದ ಕಾಣ ನಾನು ಬೈಕ್ ನಿಂದ ಬಿದ್ದಿರುತ್ತೇನೆ. ನನ್ನ ಮೊಣಕೈ ಮತ್ತ ಬಲಕೈಗೆ ಪೆಟ್ಟು ಬಿದ್ದಿರುತ್ತದೆ. ಅಪಘಾತವಾದ ನಂತರ ನನ್ನನ್ನು ಸ್ಥಳೀಯರು ಚನ್ನಪಟ್ಟಣದ ಗಂಗಪ್ಪ ಆಸ್ಪತ್ರೆಗೆ ಸೇರಿಸಿರುತ್ತಾರೆ. ಅಲ್ಲಿ ಒಂದು ವಾರ ಒಳರೋಗಿ ಚಿಕಿತ್ಸೆ ಪಡದುಕೊಂಡಿರುತ್ತೇನೆ. ಅಲ್ಲಿ ಡಾಃ ಸೋಹನ್ ಕಮಾರ್ ರವರು ನನಗೆ ಚಿಕಿತ್ಸೆ ನೀಡಿರುತ್ತಾರೆ. ನಾನು 6 ದಿನಗಳ ನಂತರ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೇನೆ. ಡಿಸ್ಚಾರ್ಜ್ ಆದ 6 ದಿನಗಳ ನಂತರ ನಾನು ಮುಂದುವರೆದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಯಲ್ಲಿ 3ವರೆ ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅಷ್ಟು ಹಣ ಖರ್ಚು ಮಾಡಿಲ್ಲದೆ ಇರುವ ಕಾರಣ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸ್ಕೂಟರ್ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ನನ್ನ ವಯಸ್ಸಿ ನ ಬಗ್ಗೆ ನಾನು ನನ್ನ ಆಧಾರ್ ಕಾರ್ಡ್ ಮತ್ತು ಶಾಲಾ

ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅಪಘಾತವಾದ ಸಮಯದಲ್ಲಿ ನನಗೆ 38 ವರ್ಷವಯಸ್ಸಾಗಿತ್ತು ಎಂದರೆ ಸರಿಯಲ್ಲ. ನಾನು ಕೂಲಿ ಮತ್ತು ಟೈಲರಿಂಗ್ ಕೆಲಸ ಮನೆಯಲ್ಲಿ ಮಾಡುತ್ತಿದ್ದೆ. ನಾನು ದಿನಕ್ಕೆ 800-1000 ರೂಪಾಯಿ ಸಂಪಾದನೆ ಮಾಡುತ್ತಿದ್ದೆ. ಈಗ ಕೆಲಸ ಮಾಡಲು ಆಗುತ್ತಿಲ್ಲ. ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು